ಕಾಲುಬಾಯಿ ರೋಗ ನಿಯಂತ್ರಣ

96(1662); ಶ್ರೀ: ತಿಪ್ಪೇಸ್ವಾಮಿ ಎಸ್ (ಮೊಳಕಾಲ್ಮೂರು)

ಅ) ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲ್ಲೂಕಿನಲ್ಲಿ ಕಾಲುಬಾಯಿ ರೋಗ ನಿಯಂತ್ರಣಕ್ಕೆ ಬಂದಿದೆಯೇ; ಈ ರೋಗ ನಿಯಂತ್ರಣಕ್ಕೆ ಸರ್ಕಾರ ಕೈಗೊಂಡ ಕ್ರಮಗಳೇನು; (ಸಂಪೂರ್ಣ ವಿವರ ನೀಡುವುದು)

ಆ) ಪಶು ಚಿಕಿತ್ಸಾ ಕೇಂದ್ರಗಳನ್ನು ಉನ್ನತೀಕರಿಸಿ ಮೇಲ್ದರ್ಜೆಗೇರಿಸುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ;

ಇ) ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರಕ್ಕೆ ಹೊಸದಾಗಿ ಪಶು ಚಿಕಿತ್ಸಾ ಕೇಂದ್ರಗಳನ್ನು ಮಂಜೂರು ಮಾಡಲು ಸರ್ಕಾರ ಕ್ರಮ ಕೈಗೊಂಡಿದೆಯೇ; (ಸಂಪೂರ್ಣ ವಿವರ ನೀಡುವುದು)

ಈ) ರಾಜ್ಯದಲ್ಲಿ ಕಾಲು ಬಾಯಿ ಜ್ವರದಿಂದ ಮೃತಪಟ್ಟಿರುವ ರಾಸುಗಳ ಸಂಖ್ಯೆ ಎಷ್ಟು; (ಸಂಪೂರ್ಣ ವಿವರ ನೀಡುವುದು)

ಉ) ಸರ್ಕಾರ ಮೃತ ರಾಸುಗಳಿಗೆ ಅಧಿಕೃತವಾಗಿ ಘೋಷಣೆ ಮಾಡಿರುವ ಪರಿಹಾರ ಧನ ಸಹಾಯವೆಷ್ಟು?

ಶ್ರೀ ಟಿ.ಬಿ. ಜಯಚಂದ್ರ (ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಮತ್ತು ಪಶು ಸಂಗೋಪನಾ ಸಚಿವರು)

ಅ) ಹೌದು.

ಮೊಳಕಾಲ್ಮೂರು ತಾಲ್ಲೂಕಿನಲ್ಲಿ 2007ರ ಜಾನುವಾರು ಗಣತಿಯಂತೆ 34821 ದನಗಳು, 13033 ಎಮ್ಮೆಗಳು ಒಟ್ಟು 47854 ಜಾನುವಾರುಗಳಿದ್ದು, ಇವುಗಳಿಗೆ ಮೊದಲನೇ ಸುತ್ತಿನಲ್ಲಿ 21613 ಜಾನುವಾರುಗಳಿಗೆ ಶೇ.45%, ಎರಡನೇ ಸುತ್ತಿನಲ್ಲಿ 24981 ಜಾನುವಾರುಗಳಿಗೆ ಶೇ.52%, ಮೂರನೇ ಸುತ್ತಿನಲ್ಲಿ 25967

ಜಾನುವಾರುಗಳಿಗೆ ಶೇ.54%, ನಾಲ್ಕನೇ ಸುತ್ತಿನಲ್ಲಿ 34610 ಜಾನುವಾರುಗಳಿಗೆ ಶೇ.81% ಮತ್ತು ಐದನೇ ಸುತ್ತಿನಲ್ಲಿ 32630 ಜಾನುವಾರುಗಳಿಗೆ ಶೇ.68%ರಷ್ಟು ಕಾಲು ಬಾಯಿ ರೋಗದ ವಿರುದ್ಧ ಲಸಿಕೆ ಹಾಕಿ ರೋಗಗ್ರಸ್ಥ ಜಾನುವಾರುಗಳಿಗೆ ಚಿಕಿತ್ಸೆ ನೀಡಿ ರೋಗವನ್ನು ನಿಯಂತ್ರಣಗೊಳಿಸಲಾಗಿದೆ.

ಆ) 2014–15ನೇ ಸಾಲಿನಲ್ಲಿ ರಾಜ್ಯದಲ್ಲಿ 100 ಪಶುವೈದ್ಯ ಸಂಸ್ಥೆಗಳನ್ನು ಉನ್ನತೀಕರಿಸಲು ಉದ್ದೇಶಿಸಿದೆ.

ಇ) ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರದಲ್ಲಿ 2007ರ ಜಾನುವಾರು ಗಣತಿಯಂತೆ 1,39,714 ಜಾನುವಾರು ಘಟಕಗಳಿದ್ದು, ರಾಷ್ಟ್ರೀಯ ಕೃಷಿ ಆಯೋಗದ ಶಿಫಾರಸ್ಸಿನಂತೆ ಪ್ರತಿ 5000 ಜಾನುವಾರು ಘಟಕಗಳಿಗೆ ಒಂದು ಪಶುವೈದ್ಯ ಸಂಸ್ಥೆ ಕಾರ್ಯನಿರ್ವಹಿಸಬೇಕಾಗಿದ್ದು, ಅದರಂತೆ 28 ಪಶುವೈದ್ಯಕೀಯ ಸಂಸ್ಥೆಗಳ ಅವಶ್ಯವಿದ್ದು, ಪ್ರಸ್ತುತ 21 ಪಶುವೈದ್ಯ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ಹೀಗಾಗಿ 7 ಪಶುವೈದ್ಯ ಸಂಸ್ಥೆಗಳ ಕೊರತೆಯಿರುತ್ತದೆ. 2014–15ನೇ ಸಾಲಿನಲ್ಲಿ 100 ಪಶುವೈದ್ಯ ಸಂಸ್ಥೆಗಳನ್ನು ಪ್ರಾರಂಭಿಸಲು ಉದ್ದೇಶಿಸಿದೆ, ಮೊಳಕಾಲ್ಮೂರು ವಿಧಾನ ಸಭಾ ಕ್ಷೇತ್ರದಲ್ಲಿ ಹೊಸ ಪಶುಚಿಕಿತ್ಸಾ ಕೇಂದ್ರಗಳನ್ನು ಸ್ಥಾಪಿಸಲು ಪರಿಶೀಲಿಸಲಾಗುವುದು.

ಈ) ರಾಜ್ಯದಲ್ಲಿ ದಿ:1–9–2013 ರಿಂದ 20–12–2013ರ ವರೆಗೆ 14441. ಜಾನುವಾರುಗಳು ಕಾಲು ಬಾಯಿ ಜ್ವರದಿಂದ ಮರಣ ಹೊಂದಿರುತ್ತವೆ. ಜಿಲ್ಲಾವಾರು ವಿವರ ಅನುಬಂಧದಲ್ಲಿ ನೀಡಿದೆ.

ಉ) ಮರಣ ಹೊಂದಿದ ಪ್ರತಿ ಹೈನುರಾಸುವಿಗೆ ₹ 25,000/– ಪ್ರತಿ ಉಳಿಮೆ ರಾಸಿಗೆ ₹ 20,000/– ಮತ್ತು ಪ್ರತಿ ಕರುವಿಗೆ ₹ 10,000/– ಪರಿಹಾರವನ್ನು ಸರ್ಕಾರವು ನೀಡುತ್ತಿದೆ.

[redacted]

District												
Bagalkot	27	4	24	55	0	0	0	0	27	4	24	55
Bangalore Rural	90	3	63	156	96	0	206	302	186	3	269	458
Bangalore Urban	25	0	9	34	193	0	315	508	218	11	324	542
Belgum	266	47	27	340	16	11	9	36	282	58	36	376
Bellary	10	1	3	14	1	1	0	2	11	2	3	16
Bidar	26	3	16	45	0	0	0	0	26	3	16	65
Bijapur	1	2	0	3	1	1	1	3	2	3	1	6
Chamrajnagar	422	113	66	601	183	42	48	273	605	155	114	874
Chikkamagalore	33	1	36	70	28	0	9	37	61	1	45	107
Chitradurga	19	1	6	29	1	1	3	5	20	5	9	34
Davangere	30	5	8	43	3	0	4	7	33	5	12	50
Dakshin Kannada	4	0	0	4	1	0	1	2	5	0	1	6
Chikkaballapura	479	5	124	608	380	3	198	581	859	8	322	1189
Dharwad	76	12	53	141	1	0	1	2	77	12	54	143
Gadag	32	4	5	41	0	0	0	0	32	4	5	41
Hassan	175	17	64	256	2	0	0	2	177	17	64	258
Haveri	77	16	51	144	1	0	0	1	78	16	51	145
Kodagu	16	1	2	19	0	0	1	1	16	1	3	20
Kolar	1291	54	1111	2456	380	6	395	781	1671	60	1506	3237
Koppal	32	6	14	52	0	0	0	0	32	6	14	52
Mandya	458	15	207	710	1767	53	858	2678	2255	68	1065	3388
Mysore	200	20	103	323	291	10	145	446	491	30	248	769
Ramnagar	291	46	562	899	453	61	615	1129	744	107	1177	2028
Shimoga	34	1	11	46	1	2	1	4	35	3	12	50
Tumkur	215	26	96	337	78	4	64	146	293	30	160	483
Udupi	5	0	1	6	0	0	0	0	5	0	1	6
Uttara Kannada	44	6	5	55	1	3	0	4	45	9	5	59
Raichur	4	0	0	4	0	0	0	0	4	0	0	4
Gulbarga	0	0	0	0	0	0	0	0	0	0	0	0
Yadgiri	0	0	0	0	0	0	0	0	0	0	0	0
Total	4412	412	2667	7491	3878	198	2874	6950	8290	610	5511	14441

ಶ್ರೀ ತಿಪ್ಪೇಸ್ವಾಮಿ .ಎಸ್.: ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ. ಮೊಳಕಾಲ್ಮೂರು ಕ್ಷೇತ್ರ ಬಹಳ ಹಿಂದುಳಿದಿರುವಂಥದ್ದು, ಆದ್ದರಿಂದ ದಯವಿಟ್ಟು 2 ಹೊಸ ಪಶು ಸಂಗೋಪನಾ ಕೇಂದ್ರಗಳನ್ನು ಮಂಜೂರಿ ಮಾಡಬೇಕೆಂದು ಕೋರುತ್ತೇನೆ.

ಶ್ರೀ ಟಿ. ಬಿ. ಜಯಚಂದ್ರ:– ಮಾನ್ಯ ಅಧ್ಯಕ್ಷರೆ, ಈಗಾಗಲೇ ಈ ಬಾರಿ 100 ಹೊಸ ಆಸ್ಪತ್ರೆಗಳನ್ನು ಮತ್ತು 100 ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸುವ ಕೆಲಸ ಈ ವರ್ಷ ಅಂದರೆ 2014–15ರ ಆಯವ್ಯಯದಲ್ಲಿದೆ. ಆಗ ಪರಿಗಣಿಸುವಂಥ ಸಂದರ್ಭದಲ್ಲಿ ಆದ್ಯತೆಯನ್ನು ಮೊಳಕಾಲ್ಮೂರು ತಾಲ್ಲೂಕಿಗೆ ಕೊಡುತ್ತೇವೆ.

ಹಣ ದುರುಪಯೋಗ

97(1913); ಶ್ರೀ. ತನ್ವೀರ್ ಸೇಠ್ (ನರಸಿಂಹರಾಜ)

ಅ) ಮೈಸೂರು ಮಹಾನಗರ ಪಾಲಿಕೆಯಲ್ಲಿ ಶೇಕಡ 27.5ರ ಅನುದಾನ ದುರುಪಯೋಗವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಇದಕ್ಕೆ ಕಾರಣರಾದವರ ವಿರುದ್ಧ ಸರ್ಕಾರ ಯಾವ ಕ್ರಮ ಕೈಗೊಂಡಿದೆ;

ಇ) ಕಳೆದ 3 ವರ್ಷಗಳಲ್ಲಿ ಶೇಕಡ 27.5ರ ಅನುದಾನದಲ್ಲಿ ಕೈಗೊಳ್ಳಲಾದ ಯೋಜನೆಗಳೆಷ್ಟು (ವಿವರ ನೀಡುವುದು)?

ಶ್ರೀ ವಿನಯಕುಮಾರ್ ಸೊರಕೆ (ನಗರಾಭಿವೃದ್ಧಿ ಸಚಿವರು)

ಅ) ದೂರು ಬಂದಿದೆ.

ಆ) ಈ ಕುರಿತಂತೆ ಇನ್ನೂ ಜಿಲ್ಲಾಧಿಕಾರಿ, ಮೈಸೂರು ಇವರಿಂದ ವರದಿ ಸ್ವೀಕೃತವಾಗಿರುವುದಿಲ್ಲ. ಆದರೆ ನಿರ್ದೇಶಕರು, ಪೌರಾಡಳಿತ ಇಲಾಖೆ ಇವರು ಹಿಂದಿನ ಅವಧಿಗೆ ಸಂಬಂಧಿಸಿದಂತೆ ಸಲ್ಲಿಸಿರುವ ವರದಿ ಪ್ರಕಾರ ಕೆಲವು ಲೋಪದೋಷಗಳು ಉಂಟಾಗಿರುವುದಾಗಿ ಕಂಡು ಬಂದಿರುತ್ತದೆ. ಈ ಹಿನ್ನೆಲೆಯಲ್ಲಿ ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಇ) ಆ ಸಂಬಂಧದ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.